ಮೂಲ ದಾವಾ ಸಂಖ್ಯೆ. 131/2017 ಡಿ ಡಬ್ಲ್ಯೂ 1

(ದಿನಾಂಕ 08-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀಮತಿ ಪಿ ಬಿ ಡಿ ವಕೀಲರಿಂದಃ-

ನಾನು ನನ್ನ ಮುಖ್ಯ ವಿಚಾರಣಾ ಸಾಕ್ಷ್ಯದ ಕುರಿತು ನ್ಯಾಯಾಲಯದ ಮುಂದೆ ನನ್ನ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಇರುತ್ತದೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ಆಸ್ತಿ ನಂ.6/ಬಿ ರ ಕರಾಕರಣೆಯಾದಿ ಹಾಜರುಪಡಿಸಿದ್ದು ಅದನ್ನು ನಿಡಿ-1 ಎಂದು, ತೆರಿಗೆ ಪಾವತಿ ರಶೀದಿ ಹಾಜರುಪಡಿಸಿದ್ದು ಅದನ್ನು ನಿಡಿ-2 ಎಂದು, ದಿಃ27-02-1984 ರ ಕ್ರಯಪತ್ರದ ದೃಢೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಡಿ-3 ಎಂದು, ಮ್ಯುಟೇಶನ್ ನಂ. 224 ರ ದೃಢೀಕೃತ ನಕಲು ಹಾಜರುಪಡಿಸಿದ್ದು ಅದನ್ನು ನಿಡಿ-4 ಎಂದು, ಇ ಸಿ ಹಾಜರುಪಡಿಸಿದ್ದು ಅದನ್ನು ನಿಡಿ-5 ಎಂದು, ವಾಹನ ನಂ.ಕೆಎ-37, ಎ-4600 ಮತ್ತು ಕೆಎ-37, ಎ-1312 ರ ಬಿ ರಿಜಿಸ್ಟರ್ ಎಕ್ಸಟ್ರ್ಯಾಕ್ಟಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-6 ಮತ್ತು 7 ಎಂದು, ಆಸ್ತಿ ನಂ.161, 163 ಹಾಗೂ 400 ಕರಾಕರಣೆಯಾದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-8 ರಿಂದ 10 ಎಂದು, ಮೂರು ಕರ ವಸೂಲಿ ಪಾವತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಡಿ-11 ರಿಂದ 13 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ